**<u>ಸಾಕ್ಷಿಯನ್ನು ದಿಃ 02.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ-</u>**

ವಾದಿಗೆ ಅಸ್ತಿ ಕೊಟ್ಟಿರುವ ಬಗ್ಗೆ ದಾಖಲೆ ತಂದಿಲ್ಲ. ನಮ್ಮ ತಂದೆಗೆ ವಾದಿಗೆ ಯಾವುದೆ ಆಸ್ತಿ ಕೊಡದಿದ್ದ ಕಾರಣ ಯಾವುದೆ ದಾಖಲೆ ತಂದು ಹಾಕಿಲ್ಲ ಎಂದರೆ ಸಾಕ್ಷಿ ತಂದೆ ದಾಖಲೆ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ನಾನು ಹಾಜರು ಪಡಿಸಿರುವಂತಹ ದಾಖಲೆಗಳನ್ನು ನೋಡಿದ್ದೇನೆ. ನಾನು ಹಾಜರು ಪಡಿಸಿದ ದಾಖಲೆಗಳಲ್ಲಿ ಸೂರಣ್ಣನವರಿಂದ ನಮ್ಮ ತಂದೆ ಖರೀದಿ ಮಾಡಿದ ದಾಖಲೆ ಇಲ್ಲ ಎಂದರೆ ಸಾಕ್ಷಿ ಅದು ತುಂಬಾ ಹಳೆಯ ದಾಖಲೆ, ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ತಂದೆ ಸೂರಣ್ಣನವರಿಂದ ಜಮೀನು ಖರೀದಿಸಿದ್ದರು ಎಂಬ ವಿಚಾರವನ್ನು ತಕರಾರು ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಜೀವಂತ ಇದ್ದಾಗ ಅವರು ಏನೇನು ವ್ಯವಹಾರ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಜೀವಂತ ಇದ್ದಾಗ ಆಗಲಿ ಅಥವಾ ಅವರ ನಂತರವಾಗಲಿ ವಾದಿಗೆ ಯಾವುದೆ ಭಾಗ ಹೋಗಿಲ್ಲ ಎಂದರೆ ಸರಿಯಲ್ಲ. ಹಾಗೆ ಹೋದಂತಹ ಜಮೀನು ನಂಬರ್ ಏನು ಎಂದರೆ ಸಾಕ್ಷಿ ಜಮೀನು ಕೊಟ್ಟಿಲ್ಲ ಹಣ ಕೊಟ್ಟಿದ್ದೇವೆ ಎನ್ನುತ್ತಾರೆ. ಹಾಗೆ ವಾದಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇಲ್ಲ, ಆದರೆ ನಾನು ಸ್ವತಃ ನೋಡಿದ್ದೆ.

3 ನೇ ಪ್ರತಿವಾದಿ ಕೆ ಸುಜಾತ ಎಂಬುವವರು ನನ್ನ ಸಹೋದರಿ ಎಂದರೆ ಸರಿ. ವಾದಿಗೆ ಹಣ ಕೊಟ್ಟ ಬಗ್ಗೆ ಉಳಿದ ಹೆಣ್ಣು ಮಕ್ಕಳಿಗೆ ಮತ್ತು ತಾಯಿಗೆ ಗೊತ್ತು. ಆ ಬಗ್ಗೆ 3 ನೇ ಪ್ರತಿವಾದಿಯನ್ನು ಸಾಕ್ಷಿ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ ಎಂದರೆ ಸರಿ. ನಮ್ಮ ತಂದೆ ವಾದಿಗೆ ಯಾವುದೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಜಮೀನು ಮಾಡಿದ ದಿನಾಂಕದಂದು 2012-13 ನೇ ಸಾಲಿನಲ್ಲಿ 17 ಲಕ್ಷ ರೂ. ಹಣವನ್ನು ನನ್ನ ಅಕ್ಕ ಮತ್ತು ತಂಗಿ ಇಬ್ಬರೂ ತೆಗೆದುಕೊಂಡು ಹೋಗಿದ್ದರು. ಸದರಿ ಹಣವನ್ನು ನಗದು ಮೂಲಕ ಕೊಟ್ಟಿದ್ದೇವು. ನಮ್ಮ ತಂದೆ ಕುಟುಂಬದಲ್ಲಿ ಬುದ್ದಿವಂತರು, ವಿದ್ಯಾವಂತರು ಇದ್ದರು. ಯಾವುದೆ ವ್ಯವಹಾರ ನಡೆದರೆ ಪತ್ರ ರೂಪದಲ್ಲಿ ಬರೆಯುವ ಅಭ್ಯಾಸ ತಂದೆಗೆ ಇತ್ತು ಎಂದರೆ ಸರಿಯಲ್ಲ. ನಾನು ಹೇಳಿದ ಹಾಗೆ ಯಾವುದೆ ಹಣವನ್ನು ವಾದಿ

ಪಡೆದಿಲ್ಲ ಎಂದರೆ ಸರಿಯಲ್ಲ. ಯಾವ ಆಸ್ತಿಯನ್ನು ಯಾರಿಗೆ ಮಾರಾಟ ಮಾಡಿದಾಗ ಸದರಿ ಹಣ ಕೊಡಲಾಗಿತ್ತು ಎಂಬ ಬಗ್ಗೆ ತಕರಾರಿನಲ್ಲಿ ಬರೆಸಿ ಹಾಕಿಲ್ಲ.

ನನಗೆ ಹುಣಸೂರು ತಾಲ್ಲೂಕು ಗೋವಿಂದನ ಹಳ್ಳಿಯ ಕೇಲವು ಸರ್ವೆನಂಬರ್ ಆಸ್ತಿಗಳು ದಾನವಾಗಿ ಬಂದಿದ್ದವು ಎಂದರೆ ಸರಿ. ಅದನ್ನು ನನ್ನ ತಾಯಿ ಬರೆದುಕೊಟ್ಟಿದ್ದರು. ಸದರಿ ಸರ್ವೆ ನಂ. 28/3 ಎ, 29, 30 ಹಾಗೂ 33/5 ಜಮೀನುಗಳನ್ನು ದಾನ ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಗಳು ನಮ್ಮ ತಾಯಿಗೆ ಹೇಗೆ ಬಂದವು ಎಂದು ಸರಿಯಾಗಿ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ನಮ್ಮ ತಂದೆ ತಾನು ದೊಡ್ಡ ಇಡುವಳಿಗಾರನಾಗುತ್ತೇನೆ ಎಂದು ತಾಯಿ ಹೆಸರಿಗೆ ರಿಜಿಸ್ಟರ್ ಮಾಡಿಸಿದ್ದರು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಸರ್ವೆ ನಂ. 28/3 ಎ, 29, 30 ಹಾಗೂ 33/5 ಜಮೀನುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ನಮ್ಮ ತಾಯಿಯ ತಂದೆ ಮನೆ ಕಡೆಯವರು ಕೊಟ್ಟಿದ್ದರು. ಸದರಿ ವಿಷಯವನ್ನು ನನ್ನ ತಕರಾರಿನಲ್ಲಿ ಹೇಳಿ ಬರೆಸಿರುತ್ತೇನೆ. ಆ ರೀತಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾಯಿಗೆ ಒಬ್ಬ ಸಹೋದರ ಮತ್ತು ಒಬ್ಬ ಸಹೋದರಿ ಇರುತ್ತಾರೆ. ಅವರನ್ನು ಕರೆದುಕೊಂಡು ಬಂದು ಸಾಕ್ಷಿ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ದಾನ ಮಾಡಿದಂತಹ ಆಸ್ತಿಗಳಲ್ಲಿ ನಮ್ಮ ತಾಯಿಗೆ ಯಾವುದೆ ಆಸ್ತಿ ಇರಲಿಲ್ಲ ಅವು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ತಂದೆ ಖಾಲಿ ನಿವೇಶನ ಅಂದರೆ ಐಟಂ ನಂ. 6 ಕ್ಕೆ ಸಂಬಂಧಿಸಿದಂತೆ ನನಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆ, ಆ ಸಮಯದಲ್ಲಿ ವಾದಿಯ ಸಮ್ಮತಿ ಸಹಿ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾನ ಪತ್ರವನ್ನು ನೋಡಿಲ್ಲವೆ ಎಂಬ ಪ್ರಶ್ನೆಗೆ ಅದು 2002 ರಲ್ಲಿ ಆಗಿದ್ದು, ಅದನ್ನು ಸರಿಯಾಗಿ ನೋಡಿಲ್ಲ ಎನ್ನುತ್ತಾರೆ. ದಾನಪತ್ರ ಬರೆದುಕೊಡುವ ಸಮಯದಲ್ಲಿ ನಮ್ಮ ತಂದೆಗೆ 57 ರಿಂದ 60 ವರ್ಷ ವಯಸ್ಸಾಗಿತ್ತು. ನಮ್ಮ ತಂದೆ 2017 ರಲ್ಲಿ ತೀರಿಕೊಂಡಿರುತ್ತಾರೆ. ಹಾಗೆ ದಾನ ಪತ್ರ ಬರೆದುಕೊಡುವ ಸಮಯದಲ್ಲಿ ನಮ್ಮ ತಂದೆ ವಯಸ್ಸು 75 ವರ್ಷ ಆಗಿದ್ದು, ಸಾಲ ಪಡೆದುಕೊಂಡ

ಬಗ್ಗೆ ದಾನ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎರಡೂ ದಾನ ಪತ್ರಗಳಲ್ಲಿ ತಂದೆಯ ವಯಸ್ಸನ್ನು ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ದಾಖಲೆಗಳನ್ನು ನೋಡಿ ನಮೂದು ಮಾಡಿಲ್ಲ ಎನ್ನುತ್ತಾರೆ. ನಮ್ಮ ತಂದೆ ತೀರಿಕೊಂಡಾಗ 74 ವರ್ಷ ವಯಸ್ಸಾಗಿರಬಹುದು. ತಂದೆಯಿಂದ ಬರೆಸಿಕೊಂಡ ಎರಡೂ ದಾನ ಪತ್ರಗಳು ಮೋಸದಿಂದ ಬರೆಸಿಕೊಂಡ ದಾನ ಪತ್ರಗಳು ಎಂದರೆ ಸರಿಯಲ್ಲ. ಐಟಂ ನಂ. 6 ಖಾಲಿ ನಿವೇಶನದಲ್ಲಿ ಈಗ ಮಳಿಗೆ ಇದ್ದು, ಅದು ಗೋಕುಲ ರಸ್ತೆಯಲ್ಲಿ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.